## ನಾಟ್ಟಿ ಪೇಯ

ಗ್ರೀನ್‌ವೇಸ್ ಫುಡ್ಸ್ ಅಂಡ್ ಬಿವರೇಜಸ್ ಕಂಪೆನಿ ನಾಟ್ಟಿ ಹೆಸರಿನ ಪಾನೀಯವನ್ನು ಬಿಡುಗಡೆ ಮಾಡಿದೆ. ಸ್ಟ್ರಾಬೆರಿ, ಸೀಬೆ, ಮಿಶ್ರ ಹಣ್ಣು ಮತ್ತು ಮಾವಿನ ಹಣ್ಣಿನ ಸ್ವಾದಗಳಲ್ಲಿ ಸಿಗುತ್ತದೆ.

ಬೇಸಿಗೆಯ ಬೇಗೆಯಿಂದ ಉಂಟಾಗುವ ಬಳಲಿಕೆಯನ್ನು ಇದು ಕಡಿಮೆ ಮಾಡುತ್ತದೆ. ತಾಜಾ ಹಣ್ಣುಗಳಿಂದ ತಯಾರಿಸುವ ಕಾರಣ ಆರೋಗ್ಯಕ್ಕೂ ಒಳ್ಳೆಯದು. ಮಕ್ಕಳನ್ನು ಆಕರ್ಷಿಸುವ ಸಲುವಾಗಿ ಛೋಟಾ ಭೀಮ್ ನ ಪೋಸ್ಟರ್ ಹಾಕಿದ್ದು ಪಾನೀಯವೂ ಮಕ್ಕಳಿಗೆ ಪ್ರಿಯವಾದದ್ದು ಎನ್ನುವುದು ಕಂಪೆನಿ ವಿವರಣೆ. 200 ಎಂಎಲ್ ಮತ್ತು ಒಂದು ಲೀಟರ್ ಪ್ಯಾಕ್‌ಗಳಲ್ಲಿ ಸಿಗುತ್ತದೆ.








## ರೇಡಿಯಂಟ್ ಆರ್ಕಿಡ್ ಉತ್ಪನ್ನ

ರೇಡಿಯಂಟ್ ಆರ್ಕಿಡ್ ಪಿಂಕ್ ಮತ್ತು ನೇರಳೆ ಬಣ್ಣಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಇದೇ ಬಣ್ಣಗಳಹಲವು ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಬ್ಯಾಗ್, ಡ್ರೆಸ್, ನೆಕ್ಲೆಸ್, ಸರಗಳು, ಬ್ರಾ, ತಂಪು ಕನ್ನಡಕಗಳು ಸೇರಿವೆ.

ಜನರೊಂದಿಗೆ ಸೌಹಾರ್ದಯುತ ಸಂಬಂಧ ಮತ್ತು ವಾತಾವರಣ ಸೃಷ್ಟಿಸುವ ಸಲುವಾಗಿ ಈ ವರ್ಷ ಇದೇ ಬಣ್ಣಗಳನ್ನು ಆಯ್ಕೆ ಮಾಡಿದೆ ಎನ್ನುವುದು ಕಂಪೆನಿ ವಿವರಣೆ. ಬೆಲೆ 499 ರೂಪಾಯಿಗಳಿಂದ ಆರಂಭ. ವಿವರಕ್ಕೆ: 9873108776. ಹೆಚ್ಚಿನ ಮಾಹಿತಿಗೆ: www.limeroad.com

## ಕ್ಯಾಚ್ ಮಿನಿಜ್ ಸಂಬಾರ ಪದಾರ್ಥ

ವೈವಿಧ್ಯಮಯ ಸಂಬಾರ ಪದಾರ್ಥಗಳ ತಯಾರಿಕಾ ಕಂಪೆನಿ ಕ್ಯಾಚ್, ಇದೀಗ ಅನೇಕ ಫ್ಲೇವರ್‌ಗಳ ವಿವಿಧ ಸಂಬಾರ ಪದಾರ್ಥಗಳ ಟಿನ್‌ಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಇಟಾಲಿಯನ್ ಟ್ರೀಟ್, ಮಲಬಾರ್ ಬ್ಲ್ಯಾಕ್ ಪೆಪ್ಪರ್, ಟ್ಯಾಂಗಿ ಸ್ನ್ಯಾಕಿ, ಎಕ್ಸ್ಟ್ರಾ ಸ್ನ್ಯಾಕಿ, ಮೀಲ್ ಮ್ಯಾಜಿಕ್, ಪೆಪ್ರಿಕಾ ಪಂಚ್, ಸಿಲ್ವರ್ ಪ್ಲೇಕ್ಸ್ ವೈವಿಧ್ಯಗಳಿವೆ.

ದೂರದ ಊರಿಗೆ ಪ್ರಯಾಣ ಮಾಡುವಾಗ ಕೊಂಡೊಯ್ಯುವುದು ಸುಲಭ. ಮತ್ತು ಎಲ್ಲ ಸ್ವಾದಗಳೂ ಒಟ್ಟಿಗೇ ಸಿಗುತ್ತವೆ.

ವಿವರಕ್ಕೆ: 9343832039








## ವ್ಯಾಲೆಂಟೇನ್ ಡೇಗಾಗಿ ವಜ್ರದ ಆಭರಣ

ಫೆಬ್ರುವರಿ ತಿಂಗಳಿನಲ್ಲಿ ಬರುವ ಪ್ರೇಮಿಗಳ ದಿನಾಚರಣೆಯನ್ನು ಗಮನದಲ್ಲಿಟ್ಟುಕೊಂಡು ಫಾರ್ ಎವರ್ ಮಾರ್ಕ್ ವಜ್ರಾಭರಣ ಕಂಪೆನಿ ಇದೀಗ ಹೊಸ ಹೊಸ ವಿನ್ಯಾಸಗಳ ವಜ್ರದ ಒಡವೆಗಳನ್ನು ಮಾರುಕಟ್ಟೆಗೆ ತಂದಿದೆ.

ಇದರಲ್ಲಿ ವೈವಿಧ್ಯಮಯ ವಿನ್ಯಾಸಗಳ ನೆಕ್ಲೆಸ್, ಓಲೆ, ಉಂಗುರ, ಪೆಂಡೆಂಟ್, ಬ್ರೇಸ್‌ಲೆಟ್‌ಗಳ ಸಂಗ್ರಹವಿದೆ. ಎಲ್ಲ ಫಾರ್‌ಎವರ್ ಜ್ಯುವೆಲ್ಲರಿಗಳಲ್ಲಿ ಸಿಗುತ್ತದೆ.